ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ (ರಿ) - ಅಮುಕ್ತ್

**ASSOCIATION OF MANGALORE UNIVERSITY COLLEGE TEACHERS ® - AMUCT**

Est: 1985 **website:www.amuct.org** Regd. No 8/90 - 91

Ist Floor, Nithyananda Complex, A S R P Road, Dongarakeri, Kodialbail, Mangalore - 575003

**AFFILIATED TO : Federation of University and College Teachers' Associations in Karnataka (FUCTAK) & All India Federation of University and College Teachers' Organisations (AIFUCTO)**

**PRESIDENT**
Dr NORBERT LOBO
M.A., M.H.R.M., M. Phil., Ph.D.
Associate Professor & HOD of Economics
St Aloysius College (Autonomous)
Mangalore - 575 003. Cell : 99641 44583
E-mail : norbert.lobo@gmail.com
**Vice-President:** Aifucto & Fuctak

**TREASURER**
Mr CHARLES STANY PAIS
M.Com.
Associate Professor of Secretarial Practice
St Agnes College (Autonomous)
Mangalore- 575 002
Cell: 94481 60154
E-mail : charlespais@yahoo.com

**GENERAL SECRETARY**
Mr LAKSHMINARAYANA BHAT A.
M.A.
Associate Professor of Economics
Besant Evening College
Mangalore - 575 003
Cell: 94819 76995
E-mail : laxminbhat64@gmail.com

25-12-2014

## ಪತ್ರಿಕಾ ಪ್ರಕಟಣೆ

### ಕಾಲ್ಪನಿಕ ವೇತನ ಮರುನಿಗದೀಕರಣ ವಿರೋಧಿಸಿ ಕಾಲೇಜು ಶಿಕ್ಷಕರ ಪ್ರತಿಭಟನೆ

**ಕಾಲೇಜು ಶಿಕ್ಷಣ ಇಲಾಖೆ ಏಕ ಪಕ್ಷೀಯವಾಗಿ ಕಾಲ್ಪನಿಕ ವೇತನ ಸೌಲಭ್ಯ ಪಡೆದಿರುವ ಕಾಲೇಜು ಶಿಕ್ಷಕರಿಗೆ ವೇತನ ಮರು ನಿಗದೀಕರಣ ಮಾಡುತ್ತಿರುವುದನ್ನು ಖಂಡಿಸಿ ರಾಜ್ಯ ಒಕ್ಕೂಟದ ಕರೆಯಂತೆ ಅಮುಕ್ತ್ 27-12-2014 ಶನಿವಾರದಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 4 ಗಂಟೆಯವರೆಗೆ ಮಂಗಳೂರಿನ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಿದೆ.**

2014 ರಲ್ಲಿ ಅನುದಾನಿತ ಕಾಲೇಜುಗಳ ವೇತನ ನಿಯಂತ್ರಣ ಮಸೂದೆ ಜಾರಿಗೆ ತಂದು 1994 ಅಂದರೆ 20 ವರ್ಷಗಳ ಹಿಂದಿನಿಂದ ಅನುಷ್ಠಾನಗೊಳಿಸುವ ಕ್ರಮ ಶಿಕ್ಷಕ ವಿರೋಧಿಯಾಗಿದ್ದು ರಾಜ್ಯ ಸರಕಾರ ಇಂತಹ ಅನ್ಯಾಯಕ್ಕೆ ಮುಂದಾಗಬಾರದು ಎಂದು ಅಮುಕ್ತ್ ಒತ್ತಾಯಿಸುತ್ತದೆ. ರಾಜ್ಯ ಸರಕಾರ ಈ ಬಗ್ಗೆ ಮರುಪರಿಶೀಲಿಸಲು ಶಾಸಕ ಶ್ರೀ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದ್ದು ಸಮಿತಿ ಸಧ್ಯದಲ್ಲೇ ವರದಿ ನೀಡಲಿದೆ. ವರದಿ ಆಧಾರದಮೇಲೆ ನಿರ್ಧಾರ ಕೈಗೊಳ್ಳಬೇಕಾಗಿದೆ. ಆದರೂ ಕಾಲೇಜು ಶಿಕ್ಷಣ ಇಲಾಖೆ ಮರುನಿಗದೀಕರಣ ಮಾಡಲು ಹೊರಟಿರುವುದು ಶಿಕ್ಷಕರಲ್ಲಿ ತೀವ್ರ ಆತಂಕವನ್ನುಂಟುಮಾಡಿದೆ.

ಶಿಕ್ಷಕರಿಗೆ ನೀಡಬೇಕಾಗಿರುವ ಸವಲತ್ತುಗಳನ್ನು ನೀಡದೇ ವೇತನ ಕಡಿತ ಮಾಡುವಲ್ಲಿ ಮಾತ್ರ ಇಲಾಖೆ ತೋರುವ ಅತಿ ಉತ್ಸಾಹದ ವಿರುದ್ಧ ಶಿಕ್ಷಕರು ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗಿದೆ. ಕಳೆದ 8 ವರ್ಷಗಳಿಂದ ಕಾಲೇಜು ಶಿಕ್ಷಕರ ಯುಜಿಸಿ ಬಾಕಿ ವೇತನ ನೀಡಿಲ್ಲ. ಮಾಸಿಕ ವೇತನ ನೀಡುವಲ್ಲಿ ಅತೀವ ವಿಳಂಬವಾಗುತ್ತಿದೆ. ಅನುದಾನಿತ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿರುವ ಸರಕಾರದ ಕ್ರಮ ಶಿಕ್ಷಣ ವಿರೋಧಿ ನೀತಿಯಾಗಿದ್ದು ಸರಕಾರಕ್ಕೆ ಸಾಕಷ್ಟು ಬಾರಿ ಈ ಬಗ್ಗೆ ಮನವಿ ಸಲ್ಲಿಸಲಾಗಿದ್ದರೂ ಸ್ಪಂದಿಸುತ್ತಿಲ್ಲ.

ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಎಲ್ಲಾ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳು ಪಾಲ್ಗೊಳ್ಳಬೇಕು ಎಂದು ಅಮುಕ್ತ್ ವಿನಂತಿಸುತ್ತದೆ.

Sd/-
ಅಧ್ಯಕ್ಷರು

ASSOCIATION OF MANGALORE UNIVERSITY COLLEGE TEACHERS
Date :..............
★ AMUCT ★

Laxminarayana
ಪ್ರಧಾನ ಕಾರ್ಯದರ್ಶಿ
General Secretary
Assn. of M'lore University College Teachers (R)